ಸುದ್ದಿ ಮಿಂಚು

ELECTION COMMISSION OF INDIA
ಚುನಾವಣಾಧಿಕಾರಿ
ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ
RETURNING OFFICER
KARNATAKA NORTH-EAST
TEACHER'S CONSTITUENCY ELECTION
ಚುನಾವಣಾಧಿಕಾರಿ

ಕಲಬುರಗಿಯ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್ ಅವರು ಬಿಜೆಪಿ ಅಭ್ಯರ್ಥಿ ಶಶೀಲ್ ನಮೋಶಿ ನಾಮಪತ್ರ ಸಲ್ಲಿಸಿದರು.

ನಮೋಶಿ ನಾಮಪತ್ರ ಸಲ್ಲಿಕೆ

ಸಂ.ಕ. ಸಮಾಚಾರ ಕಲಬುರಗಿ: ಕರ್ನಾಟಕ ವಿಧಾನ ಪರಿಷತ್‌ನ ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ಒಂದು ಸ್ಥಾನ ಆಯ್ಕೆಗೆ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ನಾಮಪತ್ರ ಸಲ್ಲಿಕೆಯ ಮೂರನೇ ದಿನವಾದ ಅ.1 (ಗುರುವಾರ) ಬಿಜೆಪಿ ಅಭ್ಯರ್ಥಿಯಾಗಿ ಶಶೀಲ್ ನಮೋಶಿ ನಾಮಪತ್ರ ಸಲ್ಲಿಸಿದ್ದಾರೆ ಎಂದು ಕ್ಷೇತ್ರದ ಚುನಾವಣಾಧಿಕಾರಿಯಾಗಿರುವ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್ ತಿಳಿಸಿದ್ದಾರೆ. ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಬಿ.ಜಿ. ಪಾಟೀಲ್, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್, ಕಾಡಾ ಮಾಜಿ ಅಧ್ಯಕ್ಷ ಶರಣಪ್ಪ ತಳವಾರ ಮತ್ತಿತರರಿದ್ದರು.

ಕಲಬುರಗಿಯಲ್ಲಿ ಮೇಯರ್ ಶೇಕ್ ಅಜ್ಮಲ ಗೋಲಾ ಅಧ್ಯಕ್ಷತೆಯಲ್ಲಿ ಪಾಲಿಕೆಯ ಸ್ಥಾಯಿ ಸಮಿತಿಯ ನೂತನ ಅಧ್ಯಕ್ಷರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು.

ಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆ

ಸಂ.ಕ. ಸಮಾಚಾರ ಕಲಬುರಗಿ: ಇಲ್ಲಿನ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಮೇಯರ್ ಶೇಕ್ ಅಜ್ಮಲ ಅಹ್ಮದ ಅಫ್ಜಲ ಗೋಲಾ ಅಧ್ಯಕ್ಷತೆಯಲ್ಲಿ ಪಾಲಿಕೆಯ ಮುಂದಿನ ಒಂದು ವರ್ಷದ ಅವಧಿಗಾಗಿ 04 ಸ್ಥಾಯಿ ಸಮಿತಿಗಳ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು.

ಕರ, ಹಣಕಾಸು ಹಾಗೂ ಮೇಲ್ಮನವಿ ಸ್ಥಾಯಿ ಸಮಿತಿಗೆ ಸೈಯದಾ ನೂರ್ ಫಾತಿಮಾ ಜೈದಿ, ಸಾರ್ವಜನಿಕ ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ ಕು. ರೇಣುಕಾ ಪರಶುರಾಮ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಸೈಯದಾ ಮಸೀರಾ ನಸ್ರೀನ್ ಮತ್ತು ಲೆಕ್ಕ ಸ್ಥಾಯಿ ಸಮಿತಿಗೆ ತಹಸೀನ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ತದನಂತರ ಮೇಯರ್ ಅಜ್ಮಲ್ ಗೋಲಾ, ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಮತ್ತು ಇತರೆ ಅಧಿಕಾರಿಗಳು ಹೂಗುಚ್ಛ ನೀಡಿ ಅಭಿನಂದಿಸಿದರು.

ಸರ್ಕಾರಿ ನೌಕರರ ಪ್ರಶಸ್ತಿಗೆ ಅರ್ಜಿ ಆಹ್ವಾನ

ಸಂ.ಕ ಸಮಾಚಾರ ಅಫಜಲಪುರ: ರಾಜ್ಯ ಸರಕಾರಿ ನೌಕರ ಸಂಘದ ವತಿಯಿಂದ ನವೆಂಬರ್ ತಿಂಗಳಲ್ಲಿ ಸರ್ಕಾರಿ ನೌಕರರ ಉತ್ತಮ ಸೇವೆ ಗುರುತಿಸಿ ನೀಡಲಾಗುವ ಪ್ರಶಸ್ತಿಗೆ ಅರ್ಹ ಸರಕಾರಿ ಅಧಿಕಾರಿ, ನೌಕರರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವವರು 15 ರೊಳಗಾಗಿ ನಿಗದಿತ ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ರಾಜ್ಯ ಸರ್ಕಾರಿ ನೌಕರ ಸಂಘದ ತಾಲೂಕು ಅಧ್ಯಕ್ಷ ಸಂಜೀವ ಬಗಲಿ ತಿಳಿಸಿದ್ದಾರೆ. ಒಟ್ಟು 271 ಪ್ರಶಸ್ತಿಗಳನ್ನು ನೀಡಲಾಗುತ್ತಿದ್ದು, ಎಲ್ಲ ಹಂತದ ಇಲಾಖೆಯ ಅಧಿಕಾರಿ ನೌಕರರನ್ನು ಆಯ್ಕೆ ಮಾಡಲಾಗುವುದು. ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳು ಸ್ವತಃ ಪ್ರಶಸ್ತಿಗೆ ಅರ್ಜಿ ಸಲ್ಲಿಸುವಂತಿಲ್ಲ. ಇವರ ಪರವಾಗಿ ವಿವಿಧ ಇಲಾಖೆಗಳಲ್ಲಿ ಸೇವಾ ದಕ್ಷತೆಯ ಮಾನದಂಡಗಳನ್ನು ಪರಿಗಣಿಸಿ ಆಯಾ ಇಲಾಖೆಯ ಮುಖ್ಯಸ್ಥರು, ಮೇಲಧಿಕಾರಿಗಳು, ಸಹೋದ್ಯೋಗಿಗಳು, ಸಂಘ–ಸಂಸ್ಥೆಗಳು, ಸಾರ್ವಜನಿಕರು ಹಾಗೂ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ನಿಗದಿತ **power media.info** ಆನ್‌ಲೈನ್ ಲಿಂಕ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು. ಆಯ್ಕೆಯಾದ ಪ್ರಶಸ್ತಿ ಪುರಸ್ಕೃತರಿಗೆ 20 ಸಾವಿರ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು. ಅರ್ಜಿದಾರರ ಸೇವಾ ವಿವರ, ಕೆಜಿಐಡಿ ಸಂಖ್ಯೆ, ವೇತನ ಚೀಟಿ, ಇತ್ತೀಚಿನ ಭಾವಚಿತ್ರ ಹಾಗೂ ಪೂರಕ ದಾಖಲೆಗಳನ್ನು ಸಲ್ಲಿಸಬೇಕು. ನಿಗದಿತ ಲಿಂಕ್ ಮೂಲಕ ಮಾಹಿತಿ ಪಡೆಯಬಹುದು ಎಂದು ತಿಳಿಸಿದ್ದಾರೆ.

ಬಲಿಷ್ಠ ಭಾರತಕ್ಕೆ ಹಿಂದೂ ಸಮಾಜ ಸಿದ್ಧವಾಗಲಿ

ಹಿಂದೂ ಜಾಗರಣ ವೇದಿಕೆ ಸದಸ್ಯ ಶ್ರೀಕಾಂತ ಶೆಟ್ಟಿ ಅಭಿಮತ | ಹಿಂದೂ ಮಹಾಗಣಪತಿ ಉತ್ಸವ

ಸಂ.ಕ. ಸಮಾಚಾರ ಕಲಬುರಗಿ: ಭಾರತ ಸಂವಿಧಾನ, ನ್ಯಾಯಪದ್ಧತಿ ಮತ್ತು ಸಾರ್ವಭೌಮ ಸುರಕ್ಷಿತವಾಗಬೇಕಿದ್ದರೆ ಹಿಂದೂ ಸಮಾಜ ಬಲಿಷ್ಠವಾಗಿರಬೇಕು. ಈ ದಿಸೆಯಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ದೇಶ ಮತ್ತು ಬಲಿಷ್ಠ ಹಿಂದೂ ಸಮಾಜ ಕಟ್ಟೋಣ ಎಂದು ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತದ ಕಾರ್ಯಕಾರಿಣಿ ಸದಸ್ಯ ಶ್ರೀಕಾಂತ ಶೆಟ್ಟಿ ಕಾರ್ಕಳ ಹೇಳಿದರು.

ನಗರದ ಸೂಪರ್ ಮಾರ್ಕೆಟ್‌ನ ಬಹುಮನಿ ಕೋಟೆ ಮುಂಭಾಗದಲ್ಲಿ ಹಿಂದೂ ಮಹಾಗಣಪತಿಯಿಂದ ಪ್ರತಿಷ್ಠಾಪಿಸಲಾದ 21 ದಿನಗಳ ಗಣೇಶೋತ್ಸದದಲ್ಲಿ ಕಲಬುರಗಿ ಹೈಕೋರ್ಟ್ ಪೀಠದ ಷರತ್ತುಬದ್ಧ ಅನುಮತಿ ಪಡೆದ ಮೇಲೆ ಶ್ರೀಕಾಂತ ಶೆಟ್ಟಿ ಗುರುವಾರ ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ಸಾರ್ವಜನಿಕರನ್ನುದ್ದೇಶಿಸಿ ಅವರು ಮಾತನಾಡಿದರು.

ಮುಂದಿನ 40–50 ವರ್ಷಗಳ ನಂತರ ಭಾರತ ಹೇಗಿರಬೇಕು ಎಂಬ ದೂರದೃಷ್ಟಿ, ಚಿಂತನೆ ಮತ್ತು ಸ್ಪಷ್ಟ ಗುರಿ ಇಟ್ಟುಕೊಂಡು ಕೆಲಸ ಮಾಡಬೇಕಿದೆ. ಸದ್ಯ ನಾವ್ಯಾರು ವಿಶ್ರಾಂತಿ ಪಡೆಯುವ ದಿನಗಳಿಲ್ಲ, ನಮ್ಮ ಮಕ್ಕಳು, ಮೊಮಕ್ಕಳನ್ನು ಸುರಕ್ಷಿತವಾಗಿ ಬದುಕಬೇಕಾದರೆ ನಾವೆಲ್ಲ ಏನು ಮಾಡಬೇಕು ಎಂಬ ದಿಸೆಯಲ್ಲಿ ಬಲಿಷ್ಠ ಹಿಂದೂ ಸಮಾಜ ಕಟ್ಟೋಣ. ಮುಂದಿನ ಯುವ ಪೀಳಿಗೆಗೆ ರಾಷ್ಟ್ರ ಪ್ರೇಮ, ರಾಷ್ಟ್ರ ರಕ್ಷಣೆ, ಭ್ರಾತೃತ್ವ, ಐಕ್ಯತೆ, ಸಮಗ್ರತೆ ಮತ್ತು ಭ್ರಾತೃತ್ವದ ನೆಲೆಗಟ್ಟಿನ ಮೇಲೆ ಉತ್ತಮ ಸಮಾಜ ನಿರ್ಮಿಸೋಣ. ಎಲ್ಲೆಲ್ಲಿ ಹಿಂದೂ ಸಮಾಜ ಬಲಿಷ್ಠವಾಗಿದ್ದಿಯೋ ಅಲ್ಲಲ್ಲಿ ಮಾತ್ರ ಸಂವಿಧಾನ, ನ್ಯಾಯಪದ್ಧತಿ ಮತ್ತು ದೇಶದ ಐಕ್ಯತೆ ಉಳಿದಿದೆ. ಹೀಗಾಗಿ ಇತಿಹಾಸದಲ್ಲಿ ಗತಿಸಿದ ವೀರ ನಾಯಕರು, ಮಹಾನ್ ದಾರ್ಶನಿಕರ ತತ್ವಾದರ್ಶಗಳನ್ನು ಪ್ರೇರಣೆ ಪಡೆದುಕೊಂಡು ದೇಶ ಮುನ್ನಡೆಸೋಣ ಎಂದು ಕರೆ ನೀಡಿದರು. ಮಾಜಿ ಸಂಸದ ಡಾ. ಉಮೇಶ ಜಾಧವ, ಮಾಜಿ ಶಾಸಕ ದತ್ತಾತ್ರೇಯ ಸಿ. ಪಾಟೀಲ್, ಜಿಪಂ ಮಾಜಿ ಅಧ್ಯಕ್ಷ ಅಂಬಾರಾಯ ಅಷ್ಟಗಿ, ಜಿಪಂ ಮಾಜಿ ಸದಸ್ಯ ಬಸವರಾಜ ಬೆಣ್ಣೂರ್, ಶ್ರೀಮಂತ ರಾಜು ನವಲಾದಿ ಸೇರಿ ಅನೇಕ ಬಿಜೆಪಿ ಕಾರ್ಯಕರ್ತರು, ಹಿಂದೂ ಪರ ಸಂಘಟನೆಗಳ ಪ್ರಮುಖರು, ಸಂಘಟಕರು ಭಾಗವಹಿಸಿದ್ದರು.

ಕಲಬುರಗಿಯಲ್ಲಿ ಗುರುವಾರ ಸಂಜೆ ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತದ ಸದಸ್ಯ ಶ್ರೀಕಾಂತ ಶೆಟ್ಟಿ ಸಭಿಕರನ್ನುದ್ದೇಶಿಸಿ ಮಾತನಾಡಿದರು.

> **ಮುಂದಿನ 40–50 ವರ್ಷಗಳ ನಂತರ ಭಾರತ ಹೇಗಿರಬೇಕು ಎಂಬ ದೂರದೃಷ್ಟಿ, ಚಿಂತನೆ ಮತ್ತು ಸ್ಪಷ್ಟ ಗುರಿ ಇಟ್ಟುಕೊಂಡು ಕೆಲಸ ಮಾಡಬೇಕಿದೆ. ಸದ್ಯ ನಾವ್ಯಾರು ವಿಶ್ರಾಂತಿ ಪಡೆಯುವ ದಿನಗಳಿಲ್ಲ, ನಮ್ಮ ಮಕ್ಕಳು, ಮೊಮಕ್ಕಳನ್ನು ಸುರಕ್ಷಿತವಾಗಿ ಬದುಕಬೇಕಾದರೆ ನಾವೆಲ್ಲ ಏನು ಮಾಡಬೇಕು ಎಂಬ ದಿಸೆಯಲ್ಲಿ ಬಲಿಷ್ಠ ಹಿಂದೂ ಸಮಾಜ ಕಟ್ಟೋಣ.**
>
> ■ **ಶ್ರೀಕಾಂತ ಶೆಟ್ಟಿ ಕಾರ್ಕಳ,**
> ದಕ್ಷಿಣ ಪ್ರಾಂತದ ಕಾರ್ಯಕಾರಿಣಿ ಸದಸ್ಯ, ಹಿಂದೂ ಜಾಗರಣಾ ವೇದಿಕೆ.

ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಇಂದು

ಸಂ.ಕ. ಸಮಾಚಾರ ಕಲಬುರಗಿ: ಇಲ್ಲಿನ ಪ್ರತಿಷ್ಠಿತ ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಶ್ರೀ ಶರಣಬಸವೇಶ್ವರ ರೆಸಿಡೆನ್ಸಿಯಲ್ ಪಿಯು ವಿಜ್ಞಾನ ಕಾಲೇಜು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಆಶ್ರಯದಲ್ಲಿ ಶುಕ್ರವಾರ ಬೆಳಗ್ಗೆ 11: 30 ಗಂಟೆಗೆ ನಗರದ ಶರಣಬಸವ ವಿವಿ ಕ್ಯಾಂಪಸ್‌ನ ಪೂಜ್ಯ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರಿಯವರ ಜಯಂತ್ಯುತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ಶರಣಬಸವೇಶ್ವರ ಸಂಸ್ಥಾನದ ಎಂಟನೇ ಪೀಠಾಧಿಪತಿ ಲಿಂಗೈಕ್ಯ ಡಾ. ಶರಣಬಸವಪ್ಪ ಅಪ್ಪಾ ಅವರ ಕೃಪಾಶೀರ್ವಾದದಿಂದ ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಹಾಗೂ ಶರಣಬಸವ ವಿವಿ ಕುಲಾಧಿಪತಿ ಮಾತೋಶ್ರೀ ಡಾ. ದಾಕ್ಷಾಯಿಣಿ ಎಸ್. ಅಪ್ಪ ಹಾಗೂ ಶ್ರೀ ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪಾ ಸಾನ್ನಿಧ್ಯವಹಿಸುವರು. ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಓಂಕಾರಮೂರ್ತಿ ಕೆ.ಎಂ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಎಸ್‌ಬಿಆರ್ ಪಿಯು ಕಾಲೇಜಿನ ಪ್ರಾಂಶುಪಾಲ ಎನ್. ಎಸ್ ದೇವರಕಲ್ ಅಧ್ಯಕ್ಷತೆವಹಿಸುವರು.

ಸ್ವಾತಂತ್ರ್ಯ ಹೋರಾಟಗಾರರ ಆದರ್ಶ ರಾಷ್ಟ್ರ ಸೇವೆಯ ಸಂಕಲ್ಪಕ್ಕೆ ಬಲ

ಸಂ.ಕ. ಸಮಾಚಾರ ಕಲಬುರಗಿ : ಸ್ವಾತಂತ್ರ್ಯ ಯೋಧರ ಆದರ್ಶ ಅವರ ಸಮಾಜ ಸೇವೆ ಜನಸೇವೆಯು ರಾಷ್ಟ್ರ ಸೇವಾ ಸಂಕಲ್ಪಕ್ಕೆ ಶಕ್ತಿ ತುಂಬುತ್ತದೆ ಯುವ ಜನತೆ ಅಂತಹ ಮಹಾನ್ ವ್ಯಕ್ತಿಗಳ ಹೆಜ್ಜೆಯಲ್ಲಿ ನಡೆದು ರಾಷ್ಟ್ರ ಸೇವೆಗೆ ಮುಂದಾಗಬೇಕು ಎಂದು ಮಾಜಿ ಸಂಸದ ಡಾ.ಉಮೇಶ್ ಜಾಧವ್ ಹೇಳಿದರು.

ನಗರದಲ್ಲಿ ಸಂತ ಸೇವಾಲಾಲ್ ಪ್ರಭಾತ ಸಪ್ತಾಹ ಶಾಖೆ ಯಶಸ್ವಿಯಾಗಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮನೆ ಮನೆ ಸಂಪರ್ಕ ಅಭಿಯಾನದ ಅಂಗವಾಗಿ ಗುರುವಾರ 99ರ ಹರೆಯದ, ವಯೋವೃದ್ಧ ಸ್ವಾತಂತ್ರ್ಯ ಹೋರಾಟಗಾರ ರಾಮಾಚಾರ್ಯ ನವಲಿ ಅವರ ಮನೆಗೆ ಭೇಟಿ ಮಾಡಿದ ವೇಳೆಯಲ್ಲಿ ಈ ವಿಷಯ ಮಂಡಿಸಿದರು.

ಸ್ವಾತಂತ್ರ್ಯ ಯೋಧರ ಜೊತೆ ಅವರ ಜೀವನ ಅನುಭವ ದೇಶಕ್ಕಾಗಿ ಅವರ ತ್ಯಾಗಮಯ ಜೀವನ ಸವೆಸಿದ ನೆನಪುಗಳನ್ನು ಆತ್ಮೀಯವಾಗಿ ಹಂಚಿಕೆ ಮಾಡಿಕೊಳ್ಳುವ ಸದಾ ಅವಕಾಶ ಲಭಿಸಿದೆ. ಸಮಾಜವನ್ನು ರಾಷ್ಟ್ರೀಯ ವಿಚಾರಧಾರೆಗಳೊಂದಿಗೆ ಕಟ್ಟುವ ಹಾಗೂ ವ್ಯಕ್ತಿ ಮತ್ತು ಪಕ್ಷಕ್ಕಿಂತ ರಾಷ್ಟ್ರ ಮುಖ್ಯ ಎಂಬ ಸಂಕಲ್ಪವನ್ನು ಬೋಧಿಸಿದ ನವಲಿಯವರ ಅನುಭವದ ಮಾತು ಯುವ ಜನತೆಗೆ ಪ್ರೇರಣೆಯಾಗಲಿ ಮತ್ತು ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ತ್ಯಾಗ ಬದ್ಧತೆಯಿಂದ ಯುವಕರು ಜೀವನ ನಡೆಸಿ ಆದರ್ಶ ಬದುಕು ನಡೆಸುವಂತಾಗಲಿ ಎಂದು ಡಾ.ಜಾಧವ್ ಹೇಳಿದರು. ಪ್ರಭಾತ ಸಪ್ತಾಹದ ಮನೆ ಮನೆ ಭೇಟಿ ವೇಳೆ ಅರವಿಂದ ನವಲಿ, ರಾಮಚಂದ್ರ ಜಾಧವ್, ವಿಷ್ಣು ತೀರ್ಥನವಲಿ, ಪ್ರಕಾಶ್ ಪವಾರ್, ಪ್ರಹ್ಲಾದ ಮಠ ಮಾರಿ, ನಾಗೇಶ್, ಕೃಷ್ಣ ಮಳ್ಳಿ ಮತ್ತು ರಮೇಶ್ ರಾಠೋಡ್ ಉಪಸ್ಥಿತರಿದ್ದರು

ಕಲಬುರಗಿಯಲ್ಲಿ ಗುರುವಾರ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ ಪೆಡ್ಲರ್‌ಗಳ ಪರೇಡ್ ನಡೆಸಿದರು.

19ಗಾಂಜಾ ಪೆಡ್ಲರ್‌ಗಳ ಬಾಂಡ್ ಓವರ್‌ಗೆ ತಾಕೀತು

ಸಂ.ಕ. ಸಮಾಚಾರ ಕಲಬುರಗಿ: ಇಲ್ಲಿನ ನಗರ ಪೊಲೀಸ್ ಆಯುಕ್ತಾಲಯ ಆವರಣದಲ್ಲಿ ಮಾದಕ ವಸ್ತುಗಳ ಅಕ್ರಮ ಮಾರಾಟಗಾರರ (ಪೆಡ್ಲರ್) ಗಳ ಪರೇಡ್ ನಡೆಯಿತು. ನಗರ ಪೊಲೀಸ್ ಆಯುಕ್ತ ಡಾ। ಶರಣಪ್ಪ ಎಸ್ ಡಿ ಪ್ರತಿಯೊಬ್ಬ ಪೆಡ್ಲರ್‌ಗಳ ಹಿನ್ನೆಲೆ, ಕುಟುಂಬದ ಸ್ಥಿತಿಗತಿ ಅರಿತು ಪೆಡ್ಲರ್‌ಗಳ ಮನಪರಿವರ್ತನೆ ಮಾಡಿದರು. ನಂತರ 10 ಠಾಣೆಗಳಿಂದಲೂ ಒಟ್ಟು 67 ಜನ ಗಾಂಜಾ ಪೆಡ್ಲರ್‌ಗಳಿಗೆ ಖಡಕ್ ಎಚ್ಚರಿಕೆ ನೀಡಿ, 29 ಜನ ಗಾಂಜಾ ಪೆಡ್ಲರ್‌ಗಳ ವಿರುದ್ಧ ಪಿಎಆರ್ ಕ್ರಮ ಕೈಗೊಂಡು, 19 ಜನರ ಗಾಂಜಾ ಪೆಡ್ಲರ್‌ಗಳ ಬಾಂಡ್ ಓವರ್ ಗೊಳಿಸುವಂತೆ ತಾಕೀತು ಮಾಡಿದರು.

ಅಲ್ಲದೆ ಮಾದಕ ವಸ್ತುಗಳ ಸೇವನೆ ಹಾಗೂ ಮಾರಾಟದಂತಹ ಚಟುವಟಿಕೆಗಳಿಂದ ಮುಕ್ತಗೊಂಡು ಸುಂದರ ಜೀವನ ಸಾಗಿಸಬೇಕು. ಸಮಾಜದ ಸ್ವಾಸ್ಥ್ಯ ಹಾಳಾಗದಂತೆ ಮಾದಕ ವಸ್ತುಗಳ ಮಾರಾಟದಿಂದ ದೂರ ಉಳಿಯುವಂತೆ ತಿಳಿಹೇಳಿದರು. ಅಷ್ಟಕ್ಕೂ ಮತ್ತೆ ಅದೇ ಚಾಳಿ ಮುಂದುವರಿಸಿದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಕಟ್ಟಾಪ್ಪಣೆ ನೀಡಿದರು. ಈ ಸಂದರ್ಭದಲ್ಲಿ ಡಿಸಿಪಿಗಳಾದ ಶಾಲೂ, ಪ್ರವೀಣ ನಾಯಕ, ಎಸಿಪಿ ಶರಣಪ್ಪ ಸುಬೇದಾರ್, 10 ಠಾಣೆಗಳ ಪಿಐಗಳು, ಹಿರಿಯ ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು.

ಸ್ವಯಂಪ್ರೇರಿತ ರಕ್ತದಾನ ಮಾಡಲಿ: ನವಲೆ

ಸಂ.ಕ. ಸಮಾಚಾರ ಕಲಬುರಗಿ: "ರಕ್ತದಾನ ಮಹಾದಾನ" ಎಂಬ ಸಂದೇಶದೊಂದಿಗೆ ಸ್ವಯಂಪ್ರೇರಿತ ರಕ್ತದಾನ ಮಾಡುವುದರಿಂದ ಹಲವು ಆಪತ್ತಿನಲ್ಲಿರುವ ರೋಗಿಗಳ ಜೀವಗಳನ್ನು ಉಳಿಸಬಹುದು. ಅಲ್ಲದೆ, ನಿಯಮಿತ ರಕ್ತದಾನದಿಂದ ದಾನಿಗಳ ದೇಹದ ಆರೋಗ್ಯವೂ ವೃದ್ಧಿಸಿ, ಚಿಂತೆ ರಹಿತವಾಗಿ ಬದುಕಲು ನೆರವಾಗುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ ಅವರು ಹೇಳಿದರು.

ನಗರದ ಜಿಲ್ಲಾ ಆಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ರಾಜ್ಯ ರಕ್ತ ಚಾಲನಾ ಪರಿಷತ್, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಸಾರ್ವಜನಿಕ ಆಸ್ಪತ್ರೆ, ಜಿಲ್ಲೆ ರಕ್ತ ನಿಧಿ ಕೇಂದ್ರಗಳು, ರೆಡ್ ರಿಬ್ಬನ ಕ್ಲಬ್‌ಗಳು, ಸ್ವಯಂ ಸೇವಾ ಸಂಸ್ಥೆಗಳು,ಎನ್.ಎಸ್.ಎಸ್. ಘಟಕದ ಶ್ರಯದಲ್ಲಿ "ಮಾನವೀಯತೆ ಒಂದು ಹನಿ ರಕ್ತ ನೀಡಿ–ಜೀವ ಉಳಿಸಿ" ಎಂಬ ಘೋಷವಾಕ್ಯದೊಂದಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅಧ್ಯಕ್ಷತೆವಹಿಸಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶರಣಬಸಪ್ಪ ಕ್ಯಾತ್ನಾಳ ಮಾತನಾಡಿ, ಜಿಲ್ಲಾ ಆಸ್ಪತ್ರೆಯಲ್ಲಿ ಗರ್ಭಿಣಿಯರಿಗೆ, ಅಪಘಾತ ಆದವರಿಗೆ ಹಾಗೂ ಡಯಾಲಿಸಿಸ್ ರೋಗಿಗಳಿಗೆ ರಕ್ತದ ಅವಶ್ಯಕತೆ ತುಂಬಾ ಇದೆ ಎಂದರು.

ವಿಭಾಗೀಯ ಜಂಟಿ ನಿರ್ದೇಶಕರ ಕಾರ್ಯಾಲಯದ ಉಪ ನಿರ್ದೇಶಕ ಡಾ.ಎ.ಎಸ್. ರುದ್ರವಾಡಿ ಅವರು ಮಾತನಾಡಿದರು. ನಂತರ ಸರ್ಕಾರಿ (ಸ್ವಾಯತ್ತ) ಪದವಿ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆಯ ಅಂಗವಾಗಿ ಸುಮಾರು 35ಕ್ಕೂ ಹೆಚ್ಚಿನ ಜನರು ರಕ್ತದಾನ ಮಾಡಿದರು.

ಜಿಲ್ಲಾ ಆಸ್ಪತ್ರೆಯ ಅಧೀಕ್ಷಕ ಹಾಗೂ ಜಿಲ್ಲಾ ಶಸ್ತ್ರಜ್ಞರಾದ ಡಾ. ರುಖಿಯ್ಯಾ ಅಸ್ನಾ ರಬಾ, ಡಾ.ಶರಣಬಸಪ್ಪ ಗಣಜಲಖೇಡ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಮಹಮ್ಮದ್ ಗಫಾರ್ ಇತರೆ ವೈದ್ಯಾಧಿಕಾರಿಗಳು, ಸಿಬ್ಬಂದಿಗಳು, ಪ್ರಾಧ್ಯಾಪಕರು, ಕಾಲೇಜಿನ ವಿದ್ಯಾರ್ಥಿಗಳು, ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

TWO WHEELER PARKING
ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ
Humanity. Give Blood. Save lives
1097

ಕಲಬುರಗಿಯಲ್ಲಿ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ಜಾಗೃತಿ ಜಾಥಾಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ ಚಾಲನೆ ನೀಡಿದರು.

CITATION

IN THE COURT OF THE SENIOR CIVIL JUDGE AT CHINCHOLI
OS NO. 7/2025

Shreedevi W/o Late. Pradeepraj age: 29 years, occupation: Household R/o Benkepalli Tq. Chincholi, Dist. Kalaburagi.
PLAINTIFF
V/S
1) Vaijinath S/o Late. Sharanappa age: 52 years, occupation: Household R/o Benkepalli Tq. Chincholi, Dist. Kalaburagi.
2) Sudha W/o Chandrakanth D/o Vaijinath age: 38 years, occupation: Household R/o Meen Habal Tq. Sedam, Dist. Kalaburagi.
3) Vishnu S/o Vaijinath age: 32 years, occupation: Agriculture R/o Benkepalli Tq. Chincholi, Dist. Kalaburagi.
DEFENDANTS

To,
2) Sudha W/o Chandrakanth D/o Vaijinath age: 38 years, occupation: Household R/o Meen Habal Tq. Sedam, Dist. Kalaburagi.

Whereas the above-named plaintiff has instituted against the defendants, summons/notices and RPAD were issued returned of defendant No. 2 un served as you are intentionally avoiding to receive the same. Hence you are hereby directed to appear in this court in person or by pleader duly instructed to answer all materials questions, relating to the case or accompanied by some person able to answer in the above matter on 04/11/2026 at 11.00 AM failing which the matter will be determined according to law.

Take notice that in default of your appearance on the day mentioned above the case will heard and decided in your absence.

Given under my hand and the seal of this court the 1st day of October 2026

JAGANNATH S. KALSKAR
Advocate Chincholi

BY ORDER OF THE COURT
CHIEF MINISTERIAL OFFICER
SENIOR CIVIL JUDGE COURT
CHINCHOLI

ವಿಠಲ್ ಹೇರೂರ್ ವೃತ್ತದ ಜಾಗ ವಿವಾದ

16ರಂದು ಕೋಲಿ ಸಮಾಜದ ಬೃಹತ್ ಪ್ರತಿಭಟನೆ

ಸಂ.ಕ. ಸಮಾಚಾರ ಕಲಬುರಗಿ: ಕಲಬುರಗಿ ಹೈಕೋರ್ಟ್ ಪೀಠದ ಸಮೀಪದ ಅಫಜಲಪುರ ರಸ್ತೆ ಮಾರ್ಗದಲ್ಲಿ ಅಹಿಂದ ನಾಯಕ, ಧೀಮಂತ ಹೋರಾಟಗಾರ ದಿ. ವಿಠ್ಠಲ್ ಹೇರೂರ್ ಅವರ ವೃತ್ತ ಮರುಸ್ಥಾಪಿಸಬೇಕು ಎಂದು ಆಗ್ರಹಿಸಿ 16 ರಂದು ಕೋಲಿ ಕಬ್ಬಲಿಗ ಸಮಾಜದ ಬೃಹತ್ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಸುಮಾರು 50 ಸಾವಿರಕ್ಕಿಂತ ಹೆಚ್ಚಿನ ಸಮುದಾಯದ ಜನರು ಪಾಲ್ಗೊಳುವ ನಿರೀಕ್ಷೆ ಹೊಂದಲಾಗಿದೆ ಎಂದು ಸ್ವಾಭಿಮಾನಿ ವಿಠ್ಠಲ್ ಹೇರೂರ್ ಅಭಿಮಾನಿಗಳ ಸಂಘದ ಪ್ರಮುಖರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಸ್ವಾಭಿಮಾನಿ ವಿಠ್ಠಲ್ ಹೇರೂರ್ ಅಭಿಮಾನಿಗಳ ಸಂಘ ಹಾಗೂ ಪೂಜ್ಯ ಬ್ರಹ್ಮಶ್ರೀ ರಾಜಗುರು ಸ್ವಾಮೀಜಿ, ಸಂಚಾಲಕರಾದ ಅವ್ವಣ್ಣ ಮ್ಯಾಕೇರಿ, ಬಸವರಾಜ ಬೂದಿಹಾಳ, ರಮೇಶ ನಾಟೀಕಾರ್, ಶಾಂತಪ್ಪ ಕೂಡಿ ಮಾತನಾಡಿ, ಕಳೆದ 17 ರಂದು ಕೆಲ ಕಿಡಿಗೇಡಿಗಳು ಕದ್ದುಮುಚ್ಚಿ ರಾತ್ರೋರಾತ್ರಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪ್ರತಿಮೆ ಪ್ರತಿಷ್ಠಾಪಿಸಿ ತೆರವುಗೊಂಡ ಬಳಿಕವೂ ಅದೇ ಜಾಗದಲ್ಲಿ ಸಿದ್ದರಾಮಯ್ಯನವರ ಮೂರ್ತಿ ಪ್ರತಿಷ್ಠಾಪನೆಗೆ ಪ್ರತಿಭಟಿಸಿರುವುದು ಖಂಡನೀಯ. ಈ ಹಿಂದೆ 2015 ರಿಂದಲೂ ವಿಠಲ್ ಹೇರೂರ್ ವೃತ್ತ, ನಾಮಫಲಕ ಹಾಕಿ ಅವರ ಜನ್ಮದಿನ, ಪುಣ್ಯಸ್ಮರಣೆ ಹೀಗೆ ಕಾರ್ಯಚಟುವಟಿಕೆಗಳನ್ನು ಮಾಡಿಕೊಂಡು ಬರಲಾಗಿದೆ. ಆದರೆ ಈ ಬಗ್ಗೆ ಮಹಾನಗರ ಪಾಲಿಕೆ ಅಧಿಕಾರಿಗಳು ವಿಠಲ್ ಹೇರೂರ್ ವೃತ್ತದ ಬಗ್ಗೆ ಆಕ್ಷೇಪಣೆ, ತಕಾರರು ಸಲ್ಲಿಸದೆ ಈಗ ರಾಜಕೀಯ ಒತ್ತಡಕ್ಕೆ ಮಣಿದು ಸಿದ್ರಾಮಯ್ಯನವರ ಮೂರ್ತಿ ಪ್ರತಿಷ್ಠಾಪಿಸಲು ಆಕ್ಷೇಪಣೆ, ತಕಾರರು ಕೇಳಿರುವ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ಅಹಿಂದ ಸಂಘಟನೆ ಹುಟ್ಟು ಹಾಕುವಲ್ಲಿ ವಿಠಲ್ ಹೇರೂರ್ ಮತ್ತು ಸಿದ್ದರಾಮಯ್ಯನವರು ಸಮಕಾಲಿನವರು. ಆದರೆ ಎರಡೂ ಸಹೋದರ ಸಮಾಜಗಳ ಮಧ್ಯೆ ಕೆಲ ಕಿಡಿಗೇಡಿಗಳು ಅನಗತ್ಯ ಗೊಂದಲ ಸೃಷ್ಟಿಸಿ ಸಮುದಾಯಗಳ ಮಧ್ಯೆ ಸಾಮರಸ್ಯ ಹದಗೆಡಿಸುವ ಪ್ರಯತ್ನ ನಡೆದಿದ್ದು, ಸಾರ್ವಜನಿಕ ವಲಯದಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಹೀಗಾಗಿ ಹಿಂದಿನ ಜಾಗದಲ್ಲಿ ಯಥಾವತ್ತಾಗಿ ವಿಠಲ್ ಹೇರೂರ್ ಅವರ ವೃತ್ತವೆಂದು ನಾಮಕರಣ ಮಾಡಬೇಕು ಎಂದು ಆಗ್ರಹಿಸಿದರು.

ಈ ವಿಚಾರದಲ್ಲಿ ಮಹಾನಗರ ಪಾಲಿಕೆ ಅಧಿಕಾರಿಗಳು ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸದೆ, ಚರ್ಚಿಸದೆ ಏಕಾಏಕಿ ಈಗ ತಕರಾರು ಮತ್ತು ಆಕ್ಷೇಪಣೆಗಾಗಿ ಕರೆದಿರುವುದು ಅತ್ಯಂತ ವಿಷಾದನೀಯ. ಹೀಗಾಗಿ ಜಿಲ್ಲಾಧಿಕಾರಿ, ನಗರ ಪೊಲೀಸ್ ಆಯುಕ್ತರನ್ನೊಳಗೊಂಡ ಎರಡೂ ಸಮುದಾಯಗಳ ಪ್ರಮುಖರ ಜತೆ ಶಾಂತಿ ಸಭೆ ಕರೆಯಬೇಕು.

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮಧ್ಯಸ್ಥಿಕೆವಹಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಆಗ್ರಹಿಸಿದರು. ಪ್ರಮುಖರಾದ ಗುರುನಾಥ ಹೇರೂರ್, ಅವ್ವಣ್ಣಗೌಡ ಪಾಟೀಲ್, ಬಸವರಾಜ ಹರವಾಳ, ಪಿಡ್ಡಪ್ಪ ಜಾಲಗಾರ, ಸಿದ್ದು ಜಮಾದಾರ್, ರವಿ ಡೊಂಗರಗಾಂವ್, ದೇವಿಂದ್ರ ಜಿಗರಳ್ಳಿ ಮತ್ತಿತರರಿದ್ದರು.

> **ಮಾಜಿ ಸಿಎಂ ಸಿದ್ದರಾಮಯ್ಯನವರ ಅವರ ಪುತ್ರ ಡಾ.ಯತೀಂದ್ರ ಅವರು ಪೌರಾಡಳಿತ, ನಗರಾಭಿವೃದ್ಧಿ ಖಾತೆವಹಿಸಿದ್ದರಿಂದ ಆಕ್ಷೇಪಣೆ ಕರೆದಿರುವುದು ಅಧಿಕಾರದ ದುರಪಯೋಗವಾಗಿದೆ. ಸೋದರ ಸಮಾಜದ ಮೇಲೆ ದಬ್ಬಾಳಿಕೆ ನಡೆಸಿರುವುದು ಖಂಡನೀಯ.**
>
> ■ **ಬ್ರಹ್ಮಶ್ರೀ ರಾಜುಗುರು ಸ್ವಾಮಿ.**

ಬೈಂಕ ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡ
ಸೇಡಂ ರಸ್ತೆ ಶಾಖೆ, ಟೊಯೊಟಾ ಶೋ ರೂಮ್ ಎದುರು,
ಹುಮ್ನಾಬಾದ್ ರಿಂಗ್ ರಸ್ತೆ, ಸೇಡಂ ರಸ್ತೆ, ಕಲಬುರಗಿ–585105

ಸಂಕ್ಷಿಪ್ತ ವಾಹನ ಇ–ಹರಾಜು ಪ್ರಕಟಣೆ

ಚರಾಸ್ತಿ ಹರಾಜು ಮಾರಾಟ ಸೂಚನೆ

ಇದರಿಂದ ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಕೆಳಗೆ ನಮೂದಿಸಿದ ಸಾಲಗಾರರು/ ಜಾಮೀನುದಾರರುಗಳಿಗೆ ತಿಳಿಸುವುದೇನೆಂದರೆ, ಸಾಲಗಾರರು ಬರೆದುಕೊಟ್ಟಿರುವ ಅಡವು/ಸಾಲದ ಕರಾರು ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬ್ಯಾಂಕು ಕೆಳಗೆ ನಮೂದಿಸಿದ ಅಡವು ಇಡಲಾದ ಮೋಟಾರು ವಾಹನವನ್ನು ಸ್ವೀಕರಿಸಿದೆ/ವಶಪಡಿಸಿಕೊಂಡಿದೆ. ಕೆಳಗೆ ನಮೂದಿಸಿದ ಖಾತೆಯ ಬಾಕಿ ವಸೂಲಾತಿಗಾಗಿ "ಯಾವ ಸ್ಥಿತಿಯಲ್ಲಿದೆಯೋ ಅಲ್ಲಿಯೇ", "ಯಾವ ರೂಪದಲ್ಲಿದೆಯೋ ಅಲ್ಲೇ" ಮತ್ತು "ಏನಿದೆಯೋ ಅದೇ" ಆಧಾರದ ಮೇಲೆ ವಾಹನವನ್ನು ಮಾರಾಟ ಮಾಡಲಾಗುವುದು. ಸಾಲಗಾರರು/ಜಾಮೀನುದಾರರು/ವಾಹನ/ಒಟ್ಟು ಬಾಕಿ/ಮೀಸಲು ಬೆಲೆ/ಇ–ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಳ ಮೊತ್ತದ ವಿವರಗಳನ್ನು ಕೆಳಗೆ ನಮೂದಿಸಲಾಗಿದೆ –

ಕ್ರ ಸಂ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲೀಕರ ಹೆಸರು ಮತ್ತು ವಿಳಾಸ	ಒಟ್ಟು ಬಾಕಿ	ಚರಾಸ್ತಿ ವಿವರ	ಇ-ಹರಾಜು 1)ದಿನಾಂಕ, ಸಮಯ 2)ಇ.ಎಂ.ಡಿ. ಸಂದಾಯ ಮಾಡುವ ಕೊನೆಯ ದಿನಾಂಕ	1)ಆಸ್ತಿಯ ಮೀಸಲು ಬೆಲೆ 2)ಇಎಂಡಿ, 3)ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ	1)ಇಎಂಡಿ ಠೇವಣಿ ಖಾತೆ ನಂ. 2)ಐ.ಎಫ್.ಎಸ್.ಸಿ ಕೋಡ್	ವಾಹನ/ಚರಾಸ್ತಿಯ ಪರಿಶೀಲನೆ ದಿನಾಂಕ ಮತ್ತು ಸಮಯ
1	ಖಾತೆ ಸಂಖ್ಯೆ –63360600000173 ಹೆಸರು – ಶ್ರೀ ಸಿದ್ಧಾರೂಢ ಎಸ್ ಕಿಣಗಿ ಅಂಗಡಿ ವಿಳಾಸ:ಮಾಲೀಕರು: ಶ್ರೀ ಸಾಯಿ ಕಲೆಕ್ಷನ್, ನಂ 6–717, ಲಕ್ಷ್ಮೀ ಟಾಕೀಸ್ ಹತ್ತಿರ, ಪುಟಾಣಿ ಗಲ್ಲಿ, ಕ್ಲಾಥ್ ಬಜಾರ್, ಗುಲ್ಬರ್ಗಾ, ಗುಲ್ಬರ್ಗಾ, ಕರ್ನಾಟಕ –585101, ವಾಸಸ್ಥಳದ ವಿಳಾಸ:ಶ್ರೀ ಸಿದ್ಧಾರೂಢ ಎಸ್ ಕಿಣಗಿ ತಂದೆ: ಶ್ರೀಮಂತರಾಯ ಕಿಣಗಿ, ಮಹಾದೇವ ದೇವಸ್ಥಾನದ ಹತ್ತಿರ, ಅಷ್ಟಗಿ, ಅಷ್ಟ, ಗುಲ್ಬರ್ಗಾ, ಕರ್ನಾಟಕ – 585104.	ರೂ. 306,763.65 + ಮತ್ತು ಅದರ ಮೇಲಿನ ಬಡ್ಡಿ ಮತ್ತು ವೆಚ್ಚಗಳು	ಅ. Vehicle – Maruthi Celerio VXI AMT- CEA4CLI ಬ. KA 32 P 0591	1)02.11.2026 14.00PM ರಿಂದ 18.00PM ಗಂಟೆಯವರೆಗೆ 2)02.11.2026 18.00PM ಗಂಟೆಯವರೆಗೆ	ಅ. 3,70,000/- ಬ. 37,000/- ಕ. 10,000/-	63360015181219 IFSC ಕೋಡ್: BARB0VJSEDA	27.10.2026 ರಿಂದ 01.11.2026 14.00PM ರಿಂದ 18.00PM (ರಜೆದಿನವನ್ನು ಹೊರತುಪಡಿಸಿ)
2	ಖಾತೆ ಸಂಖ್ಯೆ –63360600001155 ಹೆಸರು – ಶ್ರೀ ಮನೋಹರ್ ಎಸ್ ಪಾಟೀಲ್, ಅಂಗಡಿ ವಿಳಾಸ:ಮಾಲೀಕರು: ಮನೆ ನಂ #113 ಸೇಡಂ ರಸ್ತೆ, ಪ್ರಗತಿ, ಬಡೇಪುರ, ಗುಲ್ಬರ್ಗಾ, ಕರ್ನಾಟಕ –585105 ವಾಸಸ್ಥಳದ ವಿಳಾಸ:ಶ್ರೀ ಮನೋಹರ್ ಎಸ್ ಪಾಟೀಲ್, ತಂದೆ: ಶಿವರಾಜ್ ಪಾಟೀಲ್, ಮನೆ ನಂ #113 ಸೇಡಂ ರಸ್ತೆ, ಪ್ರಗತಿ, ಬಡೇಪುರ, ಗುಲ್ಬರ್ಗಾ, ಕರ್ನಾಟಕ –585105	ರೂ. 988,927.00 + ಮತ್ತು ಅದರ ಮೇಲಿನ ಬಡ್ಡಿ ಮತ್ತು ವೆಚ್ಚಗಳು	ಅ. Vehicle – KIA SELTOS G1 4 6MT GTX PLUS ಬ. KA 32 Z 0604	1)02.11.2026 14.00PM ರಿಂದ 18.00PM ಗಂಟೆಯವರೆಗೆ 2)02.11.2026 18.00PM ಗಂಟೆಯವರೆಗೆ	ಅ. 9,50,000/- ಬ. 95,000/- ಕ. 10,000/-	63360015181219 IFSC ಕೋಡ್: BARB0VJSEDA	27.10.2026 ರಿಂದ 01.11.2026 14.00PM ರಿಂದ 18.00PM (ರಜೆದಿನವನ್ನು ಹೊರತುಪಡಿಸಿ)

1.ಮಾರಾಟವನ್ನು ಕೆಳಗೆ ಸಹಿ ಮಾಡಿರುವವರು ವೆಬ್‌ಸೈಟ್ (www.baanknet.com) ಪೋರ್ಟಲ್‌ನಲ್ಲಿ ಒದಗಿಸಲಾದ ಇ–ಹರಾಜು ವೇದಿಕೆಯ ಮೂಲಕ ಮಾಡುತ್ತಾರೆ.
2.ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ ಲಿಂಕ್ https://baanknet.com/ ಗೆ ಭೇಟಿ ನೀಡಿ. ಆಸಕ್ತ ಬಿಡ್‌ದಾರರು ಮೊಬೈಲ್ ನಂ.6366533565 ಸಂಪರ್ಕಿಸಬಹುದು.

ದಿನಾಂಕ:01.10.2026, ಸ್ಥಳ:ಕಲಬುರಗಿ
ಸಹಿ/– ಅಧಿಕೃತ ಅಧಿಕಾರಿ , ಬ್ಯಾಂಕ್ ಆಫ್ ಬರೋಡ

ಬಸವ ಸಂಸ್ಕೃತಿ ಉತ್ಸವ ಪುಸ್ತಕ ಬಿಡುಗಡೆ 4ರಂದು

ಸಂ.ಕ. ಸಮಾಚಾರ ಕಲಬುರಗಿ: ಬೆಂಗಳೂರಿನ ಲಿಂಗಾಯತ ಧರ್ಮ ಅಧ್ಯಯನ ಕೇಂದ್ರದಿಂದ 4 ರಂದು ಕಲಬುರಗಿಯ ಬಸವ ಸಂಸ್ಕೃತಿ ಉತ್ಸವ–ಇವ ನಮ್ಮವ ಪುಸ್ತಕ ಬಿಡುಗಡೆ, ದೇವದಾಸಿ ವಿದ್ಯಾರ್ಥಿನಿಯರ ಶಿಕ್ಷಣದ ದತ್ತು ಸ್ವೀಕಾರ, ದೇವದಾಸಿ ಮಕ್ಕಳ ಕಲ್ಯಾಣ ಮಹೋತ್ಸವ, ಪ್ರಶಸ್ತಿ ಪ್ರದಾನ, ಕಾಯಕ ಸಮಾಜದ ಮಠಾಧೀಶರು, ಸಮಾನತೆ ತತ್ವದಡಿ ಒಂದಾಗಿರುವ ಶರಣ ದಂಪತಿಗಳಿಗೆ ಗೌರವ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಡಾ. ಶ್ರೀಶೈಲ್ ಮಸೂತಿ ಮಾತನಾಡಿ, ಅಂದು ಬೆಳಗ್ಗೆ 10 ರಿಂದ ಜಯನಗರದ ಅನುಭವ ಮಂಟಪದಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಇದುವರೆಗೆ 25 ಜನ ದೇವದಾಸಿ ಮಕ್ಕಳಿಗೆ ಶಿಕ್ಷಣದ ದತ್ತು ಸ್ವೀಕರಿಸಲಾಗಿದ್ದು, ಪಿಯುದಿಂದ ಸ್ನಾತಕೋತ್ತರ ಪದವಿವರೆಗೆ ಉಚಿತ ಶಿಕ್ಷಣ ನೀಡಲಾಗುವುದು ಎಂದರು. ಶಾಸಕ ಅಲ್ಲಮಪ್ರಭು ಪಾಟೀಲ್ ಧ್ವಜಾರೋಹಣ ನೆರವೇರಿಸಲಿದ್ದು, ಕೇಂದ್ರ ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಉದ್ಘಾಟಿಸುವರು. ಬಸವ ತತ್ವ ಚಿಂತಕ ಡಾ. ರಂಜಾನ್ ದರ್ಗಾ ಪುಸ್ತಕ ಬಿಡುಗಡೆಗೊಳಿಸಲಿದ್ದಾರೆ. ಇಲಕಲ್‌ನ ಚಿತ್ತರಗಿಯ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಪೂಜ್ಯ ಗುರುಮಹಾಂತ ಸ್ವಾಮಿ ಸಾನ್ನಿಧ್ಯವಹಿಸಿದರೆ, ನಾಡಿನ ಹರ ಗುರು ಚರಮೂರ್ತಿಗಳ ನೇತೃತ್ವ, ಸಮ್ಮುಖದಲ್ಲಿ ಸದ್ಗುರು ಬಸವಪ್ರಭು ಮಹಾಸ್ವಾಮೀಜಿಗೆ ಲಿಂಗಾನಂದ ಶ್ರೀ ಪ್ರಶಸ್ತಿ, ಡಾ. ಸೀತವ್ವ ಜೋಡಟ್ಟಿಗೆ ಚಿನ್ನೂಲಾದ್ರಿ ಚಿತ್ಕಳೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಬಸವಕಲ್ಯಾಣದ ಸಿದ್ಧರಾಮ ಬೆಲ್ದಾಳ ಶರಣರು ಅಧ್ಯಕ್ಷತೆವಹಿಸುವರು. ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ, ಹೈಕೋರ್ಟ್ ನ್ಯಾಯವಾದಿ ಶಿವರುದ್ರಪ್ಪ ಎನ್, ಟಿ, ಪ್ರಗತಿ ಪರ ಚಿಂತಕಿ ಕೆ. ನೀಲಾ ಸೇರಿ ಅನೇಕರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ವಿವರಿಸಿದರು.

ಪ್ರಮುಖರಾದ ನಾಗೇಂದ್ರಪ್ಪ ನಿಂಬರ್ಗಿ, ಉದಯಕುಮಾರ ಸಾಲಿ, ಶಿವಲಿಂಗಪ್ಪ ಕೆಂಗನಾಳ, ಅಯ್ಯಣ್ಣ ನಂದಿ, ಬಾಬು ಉಪ್ಪಿನ, ಜಗದೇವಿ ಚೆಟ್ಟಿ ಮತ್ತಿತರರಿದ್ದರು.